ಭೂಮಾಪನ ಇಲಾಖೆಯಲ್ಲಿ ನಕಾಶೆ ಯಂತ್ರದ ಬಗ್ಗೆ.

3493- ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನಕೋಟೆ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಭೂಮಾಪನ ಇಲಾಖೆಗೆ ನಕಾಶೆ ಯಂತ್ರವನ್ನು ಹೊಸದಾಗಿ ನೀಡಲಾಗಿರುವುದೇ.

ಆ) ಭೂಮಾಪನ ಇಲಾಖೆಯಲ್ಲಿ ಗ್ರಾಮದ ನಕಾಶೆಗಳು ಸಿಕ್ಕುತ್ತವೆಯೇ?

ಇ) ಭೂಮಾಪನ ಇಲಾಖೆಯಲ್ಲಿ ರೈತರಿಗೆ ನಕಾಶೆಗಳನ್ನು ನೀಡಲಾಗುತ್ತಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).

ಅ) ಹೌದು.

ಆ) ಹೌದು.

ಇ) ಹೌದು.

ಭೂಮಾಪನ ಇಲಾಖೆಗೆ ವಾಹನ.

3497 - ಶ್ರೀ ಎಂ.ವಿ. ವೆಂಕಟೇಶ (ಹೆಗ್ಗಡ ದೇವನ ಕೋಟೆ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂ ಮಾಪನ ಇಲಾಖೆಯ ಸಹಾಯಕ ನಿರ್ದೇಶಕರಿಗೆ ವಾಹನ ಅವಶ್ಯಕತೆ ಇಲ್ಲವೆ.

ಆ) ಭೂಮಾಪನ ಇಲಾಖೆಯ ಉಪ-ನಿರ್ದೇಶಕರಿಗೆ ವಾಹನ ಅವಶ್ಯಕತೆ ಇಲ್ಲವೆ.

ಇ) ಭೂಮಾಪಕ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಮತ್ತು ಉಪ-ನಿರ್ದೇಶಕರಿಗೆ ವಾಹನಗಳನ್ನು ನೀಡುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿರುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇದೆ

ಆ) ಇದೆ.

ಇ) ಸದ್ಯಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ ಸರ್ಕಾರದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ಹಾಗೂ ಸರ್ಕಾರದ ನೀತಿಗನುಗುಣವಾಗಿ ನಂತರ ವಾಹನಗಳನ್ನು ಒದಗಿಸಲು ಪರಿಶೀಲಿಸಲಾಗುವುದು.

ಭೂಮಾಪನ ಇಲಾಖೆಯಲ್ಲಿ ಸರ್ವೆಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

3498 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಿ?

ಅ) ಭೂಮಾಪನ ಇಲಾಖೆಯಲ್ಲಿ ಎಷ್ಟು ಜನ ಸರ್ವೆಯರರು ಇದ್ದಾರೆ?

ಆ) ಭೂಮಾಪನ ಇಲಾಖೆಯಲ್ಲಿ ಎಷ್ಟು ಜನ ಸರ್ವೆಯರ್‌ರವರ ಅವಶ್ಯಕತೆ ಇರುವುದು?

ಇ) ಭೂಮಾಪನ ಇಲಾಖೆಯಲ್ಲಿ ಸರ್ವೆಯರನ್ನು ನೇಮಕ ಮಾಡಿಕೊಳ್ಳಲು ಏನು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).

ಅ) ಪ್ರಥಮ ದರ್ಜೆ ಭೂಮಾಪಕರು 406

ಎರಡನೇ ದರ್ಜೆ ಭೂಮಾಪಕರು 1130

ಒಟ್ಟು 1536

ಒಟ್ಟು ಇಲಾಖೆಗೆ ಮಂಜೂರಾದ ಹುದ್ದೆಗಳು :